
# ಇನ್ನು ರಾಜ್ಯದೆಲ್ಲೆಡೆ ಅಕ್ಕ ಪಡೆ

**ಗಡಿ ಜಿಲ್ಲೆ ಬೀದರ್‌ನಲ್ಲಿ ಕಾರ್ಯಾರಂಭ ಮಾಡಿದ 'ಅಕ್ಕ ಪಡೆ' ಇದೀಗ ರಾಜ್ಯದಾದ್ಯಂತ ವಿಸ್ತರಣೆಯಾಗುತ್ತಿರುವುದು ಧರಿನಾಡಿನ ಹೆಗ್ಗಳಿಕೆ. ಮಹಿಳಾ ಪೊಲೀಸ್ ಪಡೆಗೆ ವಿಶೇಷ ತರಬೇತಿ ಕೊಟ್ಟು ಸಂಪೂರ್ಣ ಭಿನ್ನವಾದ ಟಾಸ್ಕ್ ನೀಡಲಾಗಿದೆ. 12ನೇ ಶತಮಾನದ ಬಸವಾದಿ ಶರಣರೊಂದಿಗೆ ಒಡನಾಡಿದ ಜಗತ್ತಿನ ಮೊದಲ ಕವಯತ್ರಿ ಅಕ್ಕಮಹಾದೇವಿ ಹೆಸರಲ್ಲಿ ಈ ಮಹಿಳಾ ಪಡೆ ಆರಂಭಿಸಿರುವುದು ವಿಶೇಷ.**

■ **ಶಶಿಕಾಂತ ಎಸ್. ಶೆಂಬೆಳ್ಳಿ**




'ಅಕ್ಕ ಪಡೆ' ಹೆಸರೇ ಹೇಳುವಂತೆ ಇದೊಂದು ಪಡೆ. ಅದು ಕೂಡ ಮಹಿಳಾ ಪೊಲೀಸರನ್ನು ಒಳಗೊಂಡಿರುವಂತಹದ್ದು ಎನ್ನುವುದು ವಿಶೇಷ.

ಕರ್ನಾಟಕದ ತುತ್ತ ತುದಿಯಲ್ಲಿರುವ ಬೀದರ್ ಜಿಲ್ಲೆಯಲ್ಲಿ ಆರಂಭಗೊಂಡ 'ಅಕ್ಕ ಪಡೆ'ಯನ್ನು ಇದೀಗ ಇಡೀ ರಾಜ್ಯಕ್ಕೆ ವಿಸ್ತರಿಸಲು ಸರ್ಕಾರ ನಿರ್ಧರಿಸಿದೆ. ಇದರೊಂದಿಗೆ ಬೀದರ್ ಜಿಲ್ಲೆ ಇಡೀ ರಾಜ್ಯಕ್ಕೆ ಹೊಸತೊಂದು ಪಥ, ಮಾದರಿ ಹಾಕಿಕೊಟ್ಟಂತಾಗಿದೆ.

ಹಾಗಿದ್ದರೆ 'ಅಕ್ಕ ಪಡೆ' ಬೀದರ್ ಜಿಲ್ಲೆಯಲ್ಲಿ ಅಸ್ತಿತ್ವಕ್ಕೆ ಬಂದದ್ದು ಹೇಗೆ? ಅದರ ಕೆಲಸವೇನು? ಆ ಪಡೆಯಲ್ಲಿದ್ದವರು ಇತರೆ ಪೊಲೀಸರಿಗಿಂತ ಭಿನ್ನವಾಗಿ ಏನು ಮಾಡುತ್ತಾರೆ ಎಂಬ ಪ್ರಶ್ನೆ ಮೂಡುವುದು ಸಹಜ.

ಶಾಲಾ–ಕಾಲೇಜುಗಳಿಗೆ ತೆರಳಿ ವಿದ್ಯಾರ್ಥಿಗಳಿಗೆ ಬಾಲ್ಯ ವಿವಾಹ, ದುಶ್ಚಟಗಳಿಂದ ದೂರ ಇರುವುದು ಹೇಗೆ, ಹೆಣ್ಣುಮಕ್ಕಳಿಗೆ ಕಿರುಕುಳ ತಪ್ಪಿಸಿ ಅವರ ನೆರವಿಗೆ ಧಾವಿಸುವುದು ಹಾಗೂ ಕಾನೂನಿನ ನೆರವು ಪಡೆಯುವುದು ಹೇಗೆ ಎನ್ನುವುದರ ಬಗ್ಗೆ ಜಾಗೃತಿ ಮೂಡಿಸುವುದು ಈ ಪಡೆಯ ಮುಖ್ಯ ಕೆಲಸ. ದಿನವಿಡೀ ನಗರದ ಪ್ರಮುಖ ಸ್ಥಳಗಳು, ಶಾಲಾ–ಕಾಲೇಜುಗಳು, ಬಸ್ ನಿಲ್ದಾಣಗಳ ಸುತ್ತಮುತ್ತ ಗಸ್ತು ತಿರುಗಿ ಹೆಣ್ಣುಮಕ್ಕಳು ಮುಕ್ತವಾಗಿ ಓಡಾಡುವ ವಾತಾವರಣ ಸೃಷ್ಟಿಸುವ ಕೆಲಸವನ್ನು ಈ ಪಡೆ ಮಾಡುತ್ತದೆ. ಈ ಪಡೆಯಲ್ಲಿದ್ದವರಿಗೆ ಪೊಲೀಸರಿಗಿಂತ ಭಿನ್ನವಾದ ಸಮವಸ್ತ್ರ ಇರುತ್ತದೆ. ವಾಹನಗಳನ್ನು ನೀಡಲಾಗಿದೆ.

## 'ಅಕ್ಕ ಪಡೆ' ಹುಟ್ಟಿದ್ದು ಹೇಗೆ?

ಬೀದರ್ ಸೇರಿದಂತೆ ರಾಜ್ಯದ ಇತರೆ ಜಿಲ್ಲೆಗಳಲ್ಲಿ ದುರ್ಗಾ ಪಡೆ, ಶಕ್ತಿ ಪಡೆ, ಚನ್ನಮ್ಮ ಪಡೆ ಹೀಗೆ ಸ್ಥಳೀಯವಾಗಿ ಭಿನ್ನವಾದ ಹೆಸರುಗಳಿಂದ ಮಹಿಳಾ ಪೊಲೀಸರನ್ನು ಒಳಗೊಂಡ ಪಡೆ ಸ್ಥಾಪಿಸಲಾಗಿತ್ತು. ಆದರೆ, ಆ ಪಡೆಗೆ ನಿರ್ದಿಷ್ಟವಾದ ಕೆಲಸ ಇರಲಿಲ್ಲ. ಇತರೆ ಪೊಲೀಸರಂತೆ ಆ ಪಡೆ ಕೂಡ ಕೆಲಸ ನಿರ್ವಹಿಸುತ್ತಿತ್ತು. ಬೀದರ್‌ನಲ್ಲೂ ಇದೇ ಪರಿಸ್ಥಿತಿ ಇತ್ತು. ಇದನ್ನು ಮನಗಂಡ ಅಂದಿನ ಬೀದರ್ ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ, ಸದ್ಯ ಮೈಸೂರಿನ ಕರ್ನಾಟಕ ಪೊಲೀಸ್ ಅಕಾಡೆಮಿ ನಿರ್ದೇಶಕ ಚನ್ನಬಸವಣ್ಣ ಎಸ್.ಎಲ್. ಅವರು ಯೋಜನೆಯೊಂದನ್ನು ರೂಪಿಸಿದರು.

ಬೀದರ್ ಜಿಲ್ಲೆಯ ಎಲ್ಲಾ ಪೊಲೀಸ್ ಠಾಣೆಗಳಲ್ಲಿ ಕೆಲಸ ನಿರ್ವಹಿಸುತ್ತಿದ್ದ ಮಹಿಳಾ ಪೊಲೀಸರ ಬಗ್ಗೆ ಮಾಹಿತಿ ಪಡೆದರು. ಅದರಲ್ಲಿದ್ದ ಕ್ರಿಯಾಶೀಲ ಸಿಬ್ಬಂದಿಯ ವಿವರ ಪಡೆದು, ಅಂತಹವರನ್ನು

### 'ಕ್ರಾಂತಿಕಾರಿ ಯೋಜನೆ'

ಮಹಿಳೆಯರ ಹಾಗೂ ಹೆಣ್ಣುಮಕ್ಕಳ ಸುರಕ್ಷೆಯ ದೃಷ್ಟಿಯಿಂದ ಇದೊಂದು ಕ್ರಾಂತಿಕಾರಿ ಯೋಜನೆಯಾಗಿದೆ. ಶಾಲಾ ಕಾಲೇಜು, ಶಾಪಿಂಗ್ ಮಾಲ್‌ಗಳು, ಜನನಿಬಿಡ ಪ್ರದೇಶಗಳಲ್ಲಿ ಅಕ್ಕ ಪಡೆ ವಾಹನ ಗಸ್ತು ತಿರುಗಲಿದೆ. ಮನೆಯಲ್ಲಿ, ನೆರೆಹೊರೆಯವರಿಂದ ತೊಂದರೆ ಅನುಭವಿಸುವ ಹೆಣ್ಣುಮಕ್ಕಳು ಸಹಾಯವಾಣಿ ಮೂಲಕ ಅಕ್ಕ ಪಡೆಯನ್ನು ಸಂಪರ್ಕಿಸಬಹುದು. ಪೊಲೀಸ್ ಇಲಾಖೆ ಹಾಗೂ ಎನ್‌ಸಿಸಿ ಸಹಯೋಗದಲ್ಲಿ ಅಕ್ಕ ಪಡೆ ಕಾರ್ಯನಿರ್ವಹಿಸಲಿದೆ.

–**ಲಕ್ಷ್ಮೀ ಹೆಬ್ಬಾಳಕರ್**, ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆ ಸಚಿವೆ

